ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 24–07–2017

## ಪತ್ರಿಕಾ ಆಮಂತ್ರಣ

**1. ಕೃಷಿ ಇಲಾಖೆ, ನ್ಯೂಟ್ರಿಷನ್ ಅಂಡ್ ನ್ಯೂಟ್ರಾಸಿಟಿಕಲ್ ರೀಸರ್ಚ್ ಸೆಂಟರ್, ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್ ಇವರ ಸಹಯೋಗದಲ್ಲಿ ಸಿರಿಧಾನ್ಯಗಳ ಕುರಿತು ಆಹಾರ ತಜ್ಞರು ಮತ್ತು ಬಾಣಸಿಗರಿಗೆ ಎರಡು ದಿನಗಳ ಕಾರ್ಯಾಗಾರ:**

**ಉದ್ಘಾಟನೆ:**
**ಕೃಷ್ಣಬೈರೇಗೌಡ,**
**ಕೃಷಿ ಸಚಿವರು**
**ದಿನಾಂಕ: 25–7–2017 ಮಂಗಳವಾರ ಸಮಯ: ಬೆಳಿಗ್ಗೆ 9–30 ಗಂಟೆಗೆ**
**ಸ್ಥಳ: ದ್ವಾರಕಾ ಆಡಿಟೋರಿಯಂ, ಜ್ಞಾನಗಂಗೋತ್ರಿ ಕ್ಯಾಂಪಸ್, ಎಂ.ಎಸ್. ರಾಮಯ್ಯ ನಗರ, ಬೆಂಗಳೂರು –560 054**

**2. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಸ್. ಜಿ. ಸಿದ್ಧರಾಮಯ್ಯ ಅವರ ನೇತೃತ್ವದಲ್ಲಿ ಸರ್ಕಾರಿ ಇಲಾಖೆಗಳ ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆಯ ಪ್ರಗತಿ ಪರಿಶೀಲನೆ, ನಂತರ ಪತ್ರಿಕಾಗೋಷ್ಠಿ:**

ದಿನಾಂಕ: 25–07–2017 ಮಂಗಳವಾರ, ಸಮಯ: ಮಧ್ಯಾಹ್ನ 3–00 ಗಂಟೆಗೆ

ಪರಿಶೀಲನೆ ಇಲಾಖೆ: ವ್ಯವಸ್ಥಾಪಕ ನಿರ್ದೇಶಕರ ಕಚೇರಿ, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, ಕೇಂದ್ರ ಕಚೇರಿ, ಶಾಂತಿನಗರ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

## ಈ ಬಾರಿ ಸಾಂಪ್ರದಾಯಿಕ ದಸರಾ: ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)**

ಮೈಸೂರಿನ 2017ರ ದಸರಾ ಮಹೋತ್ಸವವನ್ನು ಸಾಂಪ್ರದಾಯಿಕವಾಗಿ ಆಚರಿಸಲು ಉನ್ನತಮಟ್ಟದ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಇಲ್ಲಿ ತಿಳಿಸಿದರು.

ಇಂದಿ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಮೈಸೂರು ದಸರಾ ಉನ್ನತನಮಟ್ಟದ ಸಮಿತಿ ಸಭೆ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸೆಪ್ಟೆಂಬರ್ 21 ರಂದು ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸುವ ಮೂಲಕ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಾಗುವುದು. 30 ರಂದು ವಿಜಯ ದಶಮಿ ಜಂಬೂಸವಾರಿ ನಡೆಯಲಿದೆ. ಉದ್ಘಾಟಕರನ್ನು ಆಯ್ಕೆ ಮಾಡುವ ಅಧಿಕಾರವನ್ನು ಸಮಿತಿಯು ಮುಖ್ಯಮಂತ್ರಿಗಳಿಗೆ ನೀಡಿದೆ. ಇನ್ನು ಒಂದು ವಾರದೊಳಗೆ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ದಸರಾ ಮಹೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ: ಹೆಚ್.ಸಿ. ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿ ರಚಿಸಲಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಸಚಿವ ತನ್ವೀರ್ ಸೇಠ್ ಅವರು ಸಮಿತಿ ಉಪಾಧ್ಯಕ್ಷರಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ ಹಾಗೂ ಪ್ರವಾಸೋದ್ಯಮ ಸಚಿವ ಶ್ರೀ ಪಿಯಾಂಕ್ ಖರ್ಗೆ ಮತ್ತಿತರ ಗಣ್ಯರು ಅಧಿಕಾರಿಗಳು ಈ ಸಮಿತಿಯ ಸದಸ್ಯರಾಗಿರುತ್ತಾರೆ.

ಪ್ರಚಾರದ ಜವಾಬ್ದಾರಿಯನ್ನು ಪ್ರವಾಸೋದ್ಯಮ ಇಲಾಖೆಗೆ ವಹಿಸಲಾಗಿದೆ. ಈ ಬಾರಿ ವಸ್ತು ಪ್ರದರ್ಶನದಲ್ಲಿ ಜಿಲ್ಲಾ ಪಂಚಾಯತಿಗಳು ಮಳಿಗೆ ಪ್ರಾರಂಭಿಸುವುದು ಬೇಡ. ಸರ್ಕಾರದ ಪ್ರಮುಖ 15 ರಿಂದ 20 ಇಲಾಖೆಗಳು ದಸರಾ ಉದ್ಘಾಟನೆಯ ದಿನದಂದೇ ವಸ್ತು ಪ್ರದರ್ಶನ ಮಳಿಗೆಯನ್ನು ಪ್ರಾರಂಭಿಸಬೇಕು ಎಂದು ಮುಖ್ಯ ಕಾರ್ಯದರ್ಶಿಗಳು ಸುತ್ತೋಲೆ ಹೊರಡಿಸಲಿದ್ದಾರೆ ಎಂದು ತಿಳಿಸಿದರು.

ಮೈಸೂರು ನಗರದಲ್ಲಿ ರಾಮಸ್ವಾಮಿ ವೃತ್ತದಿಂದ ಬನ್ನಿಮಂಟಪದವರೆಗೆ ದಸರಾ ಮೆರವಣಿಗೆ ನಡೆಯಲಿರುವ ರಸ್ತೆಯನ್ನು ಕಾಂಕ್ರೀಂಟ್ ರಸ್ತೆಯಾಗಿ ಅಭಿವೃದ್ಧಿಪಡಿಸಲಾಗಿದೆ. ನಗರದ ಇತರ ರಸ್ತೆಗಳ ಅಭಿವೃದ್ಧಿಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಮೈಸೂರು ಮಹಾನಗರಪಾಲಿಕೆ ಹಾಗೂ ಲೋಕೋಪಯೋಗಿ ಇಲಾಖೆಗೆ ಸೂಚನೆ ನೀಡಲಾಗಿದೆ. ಸೆಪ್ಟೆಂಬರ್ 30 ರಂದು ಮಧ್ಯಾಹ್ನ 1–15 ಕ್ಕೆ ನಂದೀಪೂಜೆ ಮಾಡುವ ಮೂಲಕ ದಸರಾ ಮೆರವಣಿಗೆಗೆ ಚಾಲನೆ ನೀಡಲಾಗುವುದು. 3–15 ಕ್ಕೆ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಲಾಗುವುದು. ದಸರಾ ಮೆರವಣಿಗೆಯನ್ನು ಇನ್ನಷ್ಟು ಆಕರ್ಷಣೀಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಎಲ್ಲಾ ಜಿಲ್ಲೆಗಳ ಸ್ಥಬ್ಧಚಿತ್ರಗಳೊಂದಿಗೆ ರಾಜ್ಯ ಹೊರರಾಜ್ಯದ ವಿಶಿಷ್ಠ ಕಲೆಗಳ ಪ್ರದರ್ಶನವು ನಡೆಯಲಿದೆ.

ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ದಸರಾ ಸಂದರ್ಭದಲ್ಲಿ ವಾಹನ ಪ್ರವೇಶ ತೆರಿಗೆ ಇದ್ದಲ್ಲಿ ವಿನಾಯಿತಿ ನೀಡಲು ಕ್ರಮಕೈಗೊಳ್ಳಲಾಗುವುದು. ಕಳೆದ ವರ್ಷ ದಸರಾಕ್ಕೆ 13.2 ಕೋಟಿ ರೂ. ವೆಚ್ಚವಾಗಿದ್ದು ಈ ವರ್ಷ 15 ಕೋಟಿ ರೂ. ವೆಚ್ಚವಾಗಬಹುದೆಂದು

ಅಂದಾಜಿಸಲಾಗಿದೆ. ಇದರೊಂದಿಗೆ ಈ ಬಾರಿಯ ವಿಶ್ವಪ್ರವಾಸೋದ್ಯಮ ದಿನಾಚರಣೆಯನ್ನು ಸೆಪ್ಟೆಂಬರ್ 27 ರಂದು ಮೈಸೂರಿನಲ್ಲೇ ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು.

ಲೋಕೋಪಯೋಗಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ: ಹೆಚ್.ಸಿ. ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಶ್ರೀ ತನ್ವೀರ್ ಸೇಠ್, ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ, ಮೈಸೂರು ಜಿಲ್ಲೆಯ ಶಾಸಕರುಗಳು, ಜಿಲ್ಲಾ ಪಂಚಾಯತಿ ಅಧ್ಯಕ್ಷೆ ಶ್ರೀಮತಿ ನಯಿಮಾ ಸುಲ್ತಾನೆ, ಮೇಯರ್ ರವಿಕುಮಾರ್ ಮೊದಲಾದವರು ಹಾಜರಿದ್ದರು.

## ನವೆಂಬರ್ 16ರಿಂದ 18ರವರೆಗೆ ಐಟಿಇ ಬಿಜ್ –ಬೆಂಗಳೂರು ಬಯೋ 2017

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ಬೆಂಗಳೂರು ಐ.ಟಿ.ಇ. ಬಿಜ್ 2017 ರ 20ನೇ ಆವೃತ್ತಿ ಹಾಗೂ ಬೆಂಗಳೂರು ಇಂಡಿಯಾ ಬಯೋ 2017 ರ 17 ಆವೃತ್ತಿಯನ್ನು ನವೆಂಬರ್ 16 ರಿಂದ 18 ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗುವುದು ಎಂದು ರಾಜ್ಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಈ ಕಾರ್ಯಕ್ರಮದ ಥೀಮ್ ಅನಾವರಣೆ ಮಾಡಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಈ ಬಾರಿ ಕೌಶಲ್ಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಿದ್ದೇವೆ. "ಕಲ್ಪಿಸಿ, ನವೀಕರಿಸಿ ಮತ್ತು ಸಂಶೋಧಿಸಿ' ಎಂಬ ಶೀರ್ಷಿಕೆ ಮೇಲೆ ಕಾರ್ಯಕ್ರಮ ಕೇಂದ್ರೀಕೃತವಾಗಿದೆ. ವೈಮಾನಿಕ, ಮಾಹಿತಿ ಹಾಗೂ ಜೈವಿನ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿರಬೇಕು ಎಂಬುದು ನಮ್ಮ ಉದ್ದೇಶವಾಗಿದೆ. ಜೈವಿಕ ತಂತ್ರಜ್ಞಾನದಲ್ಲಿ ಸಹ ಅವಕಾಶ ತೆರೆಯಲಾಗಿದ್ದು ಒಟ್ಟು, 20,000 ಕಂಪೆನಿಗಳಲ್ಲಿ 6000 ಉತ್ಪಮ್ಮ ಸಂಬಂಧಿಸಿದ್ದಾಗಿದೆ. ಪ್ರಸ್ತುತ ಗ್ರಾಮೀಣ ಪ್ರದೇಶದಿಂದ 350, ಮಹಿಳೆಯರಲ್ಲಿ 300 ಪ್ರದರ್ಶಕರು ಭಾಗವಹಿಸುತ್ತಿದ್ದು,. ಇದರ ಸಂಖ್ಯೆ ಹೆಚ್ಚಾಗುವ ನಿರೀಕ್ಷೆ ಇದೆ. ವಿವಿಧ ವಿಷಯಗಳಾದ ಕಾಡ್ ಅಂಡ್ ಬಿಗ್ ಡಾಟಾ, ಏರೋಸ್ಪೇಸ್, ಡಿಫನ್ಸ್, ಟೆಲಿಕಾಮ್, ಅನಿಮೇಶನ್ ಆಂಕಾಲಜಿ ಮುಂತಾದ ವಿಚಾರಗಳು ಸಮ್ಮೇಳನದಲ್ಲಿ ಇರುತ್ತವೆ ಎಂದರು.

ಸಭೆಯಲ್ಲಿ ಮಾತನಾಡಿದ ಬಯೋಕಾನ್ ಲಿಮಿಟೆಡ್‌ನ ಸಿಎಂ.ಡಿ ಡಾ. ಕಿರಣ್ ಮುಜುಂದಾರ್ ಷಾ ಮಾತನಾಡಿ ಜೈವಿಕ ತಂತ್ರಜ್ಞಾನವು ತಂತ್ರಜ್ಞಾನವನ್ನು ಹೆಚ್ಚು ಅಬಲಂಭಿತವಾಗಿದೆ. ನಾವು ಹೊಸ ಅವಿಷ್ಕಾರಗಳನ್ನು ಈ ಪ್ರದರ್ಶನದಲ್ಲಿ ಪ್ರದರ್ಶಿಸಬೇಕೆಂದರು.

ಪತ್ರಿಕಾಗೋಷ್ಠಿಯಲ್ಲಿ ಇನ್ಫೋಸಿಸ್ ಲಿಮಿಟೆಡ್‌ನ ಸಹ ಸಂಸ್ಥಾಪಕರಾದ ಕ್ರಿಸ್ ಗೋಪಾಲಕೃಷ್ಣನ್, ನಾಸ್‌ಕಾಮ್‌ನ ಮಾಜಿ ಅಧ್ಯಕ್ಷರು ಹಾಗೂ ಮೈಂಡ್‌ಟ್ರೀ ಅಧ್ಯಕ್ಷರಾದ ಕೃಷ್ಣಕುಮಾರ್ ನಟರಾಜನ್, ಎಸ್‌ಟಿಪಿಐ ನಿರ್ದೇಶಕರಧ ಶೈಲೇಂದ್ರ ತ್ಯಾಗಿ, ಮಾಹಿತಿ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಗೌರವ್ ಗುಪ್ತಾ, ನಿರ್ದೇಶಕರಾದ ಅಸ್ಮಾ ಫಾತಿಮಾ ಅವರು ಉಪಸ್ಥಿತರಿದ್ದರು.

## ಅರ್ಹ ಅಭ್ಯರ್ಥಿಗಳ ಅರ್ಹತಾ ಪಟ್ಟಿ ಪ್ರಕಟ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಪೌರಾಡಳಿತ ಇಲಾಖೆಯ ಮಹಾನಗರಪಾಲಿಕೆಗಳಲ್ಲಿನ ಅಕೌಂಟೆಂಡ್ – 08 (ಹೈ.ಕ) ಹುದ್ದೆಗಳು, ಪೌರಾಡಳಿತ ಇಲಾಖೆಯಲ್ಲಿನ ಮಹಾನಗರ ಪಾಲಿಕೆಗಳ ತೋಟಗಾರಿಕಾ ಸಹಾಯಕರು – 02 (ಹೈ.ಕ) ಹುದ್ದೆಗಳು ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದಲ್ಲಿ ನಿಲಯಪಾಲಕರು (ಮಹಿಳೆ) – 36 (30 +_ 06 ಹೈ.ಕ) ಹುದ್ದೆಗಳ 1:2 ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಜುಲೈ 21 ರಂದು ಕರ್ನಾಟಕ ಲೋಕಸೇವಾ ಆಯೋಗದ ವೆಬ್‌ಸೈಟ್ **www.kpsc.kar.nic.in** ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎ:ಜೆಡಿ:ಜಿಪಿಆರ್.

## ಮೌಖಿಕ ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2017 ನೇ ಸಾಲಿನ ಪ್ರಥಮ ಅಧಿವೇಶನ ಇಲಾಖಾ ಪರೀಕ್ಷೆಗಳ ಕನ್ನಡ ಭಾಷ ವಿಷಯದ ಮೌಖಿಕ ಸಂದರ್ಶನಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಆಯೋಗದ ವೆಬ್‌ಸೈಟ್ **"http://kpsc.kar.nic.in"** ನಲ್ಲಿ ಪ್ರಕಟಿಸಿದೆ.

ಅರ್ಹ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನಕ್ಕೆ ಸಂಬಂಧಿಸಿದಂತೆ ಆಯೋಗದ ಕೇಂದ್ರ ಕಚೇರಿ ಮತ್ತು ವಿಭಾಗೀಯ/ಜಿಲ್ಲಾ ಕೇಂದ್ರಗಳಲ್ಲಿ ಸಂದರ್ಶನವನ್ನು ನಡೆಸಲಾಗುವುದು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾನಿಲಯ, ಜ್ಞಾನ ಸಂಗ, ಬೆಳಗಾವಿ – 590 018 – 27–07–2017, ಉಪ ನಿರ್ದೇಶಕರವರ ಕಚೇರಿ, ಡಿ.ಯು.ಡಿ.ಸಿ. ಸಭಾಂಗಣ, ಮಿಉನಿ ವಿಧಾನಸೌಧ, ಕಲಬರಗಿ – 585 102, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಸಾಗರ ರಸ್ತೆ, ಶಿವಮೊಗ್ಗ– 577 201 – 27–07–2017, ಡಯಟ್, ವಸಂತ ಮಹಲ್ ನಜರ್‌ಬಾದ್, ಮೈಸೂರು – 570 010 – 27–07–2017 ಹಾಗೂ ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು – 560 001 – 03–08–2017 (ಐ.ಎ.ಎಸ್., ಐ.ಎಫ್.ಎಸ್ ಮತ್ತು ಐ.ಪಿ.ಎಸ್. ಅಭ್ಯರ್ಥಿಗಳು ಸೇರಿದಂತೆ) ಸಂದರ್ಶನ ನಡೆಯಲಿದೆ.

ಮೌಖಿಕ ಸಂದರ್ಶನಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳ ಸಂದರ್ಶನ ಸೂಚನಾಪತ್ರಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದ್ದು, ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಅಲ್ಲದೆ ಸಂದರ್ಶನ ಸೂಚನಾ ಪತ್ರಗಳನ್ನು ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ತ್ವರಿತ ಅಂಚೆ ಮೂಲಕವೂ ಸಹ ರವಾನಿಸಲಾಗಿಎ.

ಅರ್ಹ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನೋಂದಣಿ ಸಂಖ್ಯೆಯನ್ನು ನಮೂದಿಸಿ ಸಂದರ್ಶನ ಸೂಚನಾಪತ್ರಗಳನ್ನು ಸಂದರ್ಶನದ ವೇಳೆ ಕಡ್ಡಾಯವಾಗಿ ಹಾಜರುಪಡಿಸಬೇಕು. ಸೂಚನಾ ಪತ್ರಗಳನ್ನು ಹಾಜರುಪಡಿಸದೇ ಇರುವ ಅಭ್ಯರ್ಥಿಗಳೀಗೆ ಮೌಖಿಕ ಸಂದರ್ಶನಕ್ಕೆ ಅವಕಾಶ ನೀಡುವುದಿಲ್ಲ. ಸೂಚನಾ ಪತ್ರಗಳು ಲಭ್ಯವಾಗದ ಅರ್ಹ ಅಭ್ಯರ್ಥಿಗಳೂ ಜುಲೈ 25 ರ ಒಳಗಾಗಿ ಆಯೋಗದ ಕೇಂದ್ರ ಕಚೇರಿಯ ದೂರವಾಣಿ ಸಂಖ್ಯೆ 080 – 30574944/30574945 ಮೂಲಕ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎ:ಜೆಡಿ:ಜಿಪಿಆರ್.

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಕನ್ನಡ ಮತ್ತು ಸಂಡಸ್ಕೃತಿ ಇಲಾಖೆಯಲ್ಲಿನ ಉಪ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಪ್ರಾಂಶುಪಾಲರು (ಉರ್ದು ಭಾಷೆ), ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿನ ಸಹಾಯಕ ನಿರ್ದೇಶಕರು ಮತ್ತು ಭಾಷಾಂತರ ನಿರ್ದೇಶನಾಲಯದಲ್ಲಿನ ಭಾಷಾಂತರಕಾರರು ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಗಳನ್ನು ಜುಲೈ 22 ರಂದು ಆಯೋಗದ ಅಂತರ್ಜಾಲದಲ್ಲಿ **"http://kpsc.kar.nic.in/Selection List** ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಜುಲೈ 28 ರೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಇವರಿಗೆ

ಸಲ್ಲಿಸಬಹುದಾಗಿದೆ. ನಿಗದಿತ ದಿನಾಂಕ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎ:ಜೆಡಿ:ಜಿಪಿಆರ್.

## ರಾಷ್ಟ್ರೀಯ ಮಾದರಿ ಸಮೀಕ್ಷೆ ಕುರಿತು ಎರಡು ದಿನಗಳ ರಾಜ್ಯದ ಮಟ್ಟದ ತರಬೇತಿ ಕಾರ್ಯಾಗಾರ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ಆರ್ಥಿಕ ಮತ್ತು ಸಾಂಖ್ಯಾಕ ನಿರ್ದೇಶನಾಲಯ ಮತ್ತು ಪದನಿಮಿತ್ತ ರಾಜ್ಯ ಕೃಷಿ ಗಣತಿ ಆಯುಕ್ತ ಕಚೇರಿ ವತಿಯಿಂದ **" Household Consumer Expenditure & Social Consumption on Health and Education"** ಎಂಬ ವಿಷಯ ಕುರಿತು ರಾಷ್ಟ್ರೀಯ ಮಾದರಿ ಸಮೀಕ್ಷೆ 75 ನೇ ಸುತ್ತಿನ ರಾಜ್ಯಮಟ್ಟದ ತರಬೇತಿ ಕಾರ್ಯಾಗಾರವನ್ನು ಜುಲೈ 27 ಮತ್ತು 28 ರಂದು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ತರಬೇತಿ ಕಾರ್ಯಾಗಾರದ ಉದ್ಘಾಟನೆ ಸಮಾರಂಭವು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜುಲೈ 27 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಹೆಚ್.ಆರ್. ಅರಕೇರಿ ಸಭಾಂಗಣ, ಕೃಷಿ ತಂತ್ರಜ್ಞರ ಸಂಸ್ಥೆಯ ಸಭಾಂಗಣ (ಐ.ಎ.ಟಿ) ನಂ. 15, ಕ್ವೀನ್ಸ್ ರಸ್ತೆ, ಬೆಂಗಳೂರು – 560 052 ಇಲ್ಲಿ ನಡೆಯಲಿದೆ.

ಎಸ್‌ಎ:ಜೆಡಿ:ಜಿಪಿಆರ್.

## ಶೈಕ್ಷಣಿಕ ಪ್ರೋತ್ಸಾಹ ಧನಸಹಾಯಕ್ಕಾಗಿ ಅರ್ಜಿ ಆಹ್ವಾನ

[

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು 2017–18 ನೇ ಸಾಲಿನಲ್ಲಿ ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಸಂಘಟಿತ ಕಾರ್ಮಿಕರ ಅರ್ಹ ಮಕ್ಕಳಿಂದ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇಕಡ 50 ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಶೇಕಡ 45 ಅಂಕ ಪಡೆದು ತೇರ್ಗಡೆಹೊಂದಿದವರು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

2017–18 ನೇ ಸಾಲಿನಲ್ಲಿ ಪ್ರೌಢಶಾಲೆ (8 ರಿಂದ 10ನೇ ತರಗತಿವರೆಗೆ) ಪಿ.ಯು.ಸಿ, ಐ.ಟಿ.ಐ. ಡಿ.ಇಡಿ, ಡಿಪ್ಲೋಮೊ, ಪದವಿ, ಸ್ನಾತಕೋತ್ತರ ಪದವಿ, ಇಂಜಿನೀಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಅರ್ಹರು.

ಮಂಡಳಿಗೆ ವಂತಿಗೆ ಪಾವತಿಸುವ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂದೆ/ತಾಯಿ/ಪೋಷಕರ ಮಾಸಿಕ ವೇತನ ಗರಿಕಷ್ಠ ರೂ 15,000/– ಮೀರಿರಬಾರದು.

ಅರ್ಜಿಯನ್ನು ಮಂಡಲಿಯ ವೆಬ್‌ಸೈಟ್ www.klwb-kar.com ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಪಡೆಯಬಹುದು.

ಅರ್ಜಿಯನ್ನು ಸೂಕ್ತ ದಾಖಲೆಗಳೊಂದಿಗೆ ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ, ನಂ 48, 2ನೇ ಮಹಡಿ, ಮತ್ತಿಕರೆಗೆ ಮುಖ್ಯರ್ತೆ, ಯಶವಂತಪುರ, ಬೆಂಗಳೂರು – 560 022 ಇವರಿಗೆ ಸೆಪ್ಟೆಂಬರ್ 28 ರೊಳಗೆ ತಲುಪಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ, ನಂ 48, 2ನೇ ಮಹಡಿ, ಮತ್ತಿಕರೆಗೆ ಮುಖ್ಯಸ್ತೆ, ಯಶವಂತಪುರ, ಬೆಂಗಳೂರು – 560 022 (ದೂರವಾಣಿ ಸಂಖ್ಯೆ : 080–23570266) ಹಾಗೂ ಆಯಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳು, ತಾಲ್ಲೂಕು ಕೇಂದ್ರದಲ್ಲಿರುವ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರ ಕಚೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಎಸ್‌ಎ:ಜೆಡಿ:ಜಿಪಿಆರ್.

## ಕೃಷಿ ಬೆಲೆ ಆಯೋಗದಲ್ಲಿ ಕೆಲಸ ನಿರ್ವಹಿಸಲು ಒಪ್ಪಂದದ ಮೇರೆಗೆ ಸಿಬ್ಬಂದಿ ನೇಮಕ

[

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ಕರ್ನಾಟಕ ಕೃಷಿ ಬೆಲೆ ಆಯೋಗಕ್ಕೆ ಅಗತ್ಯವಿರುವ ತಾಂತ್ರಿಕ ಹುದ್ದೆದಗಳನ್ನು ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಷರತ್ತಿಗೆ ಒಳಪಟ್ಟು ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಆಗಸ್ಟ್ 11 ರೊಳಗೆ ಸೀಲು ಮಾಡಿದ ಲಕೋಟೆಯಲ್ಲಿ ಮುದ್ದಾಂ/ನೋಂದಣಿ ಅಂಚೆ ಮೂಲಕ ಸಲ್ಲಿಸಬೇಕು. ತಡವಾಗಿ ಬಂದ ಅರ್ಜಿಗಳನ್ನು ಪರಿಶೀಲಿಸಲಾಗುವುದಿಲ್ಲ.

ತಾಂತ್ರಿಕ ಸಲಹೆಗಾರರ ಹುದ್ದೆಗೆ ಕೃಷಿ ಅರ್ಥಶಾಸ್ತ್ರ ಅಥವಾ ಕೃಷಿ ಮಾರುಕಟ್ಟೆ ಅಥವಾ ಕೃಷಿ ಸಂಖ್ಯಾಶಾಸ್ತ್ರ ಅಥವಾ ಬೇಸಾಯ ಶಾಸ್ತ್ರ, ಕೃಷಿ ವಿಸ್ತರಣಾ ಅಥವಾ ಕೃಷಿ/ತೋಟಗಾರಿಕೆ ವಿಜ್ಞಾನ ಸಂಬಂಧಪಟ್ಟ ವಿಷಯಗಳಲ್ಲಿ ಪಿ.ಹೆಚ್.ಡಿ. ಪದವಿ ಹೊಂದಿ ಕನಿಷ್ಠ 5 ವರ್ಷಗಳ ಅನುಭವನ ಅಥವಾ ಸ್ನಾತಕೋತ್ತರ ಪದವಿ ಹೊಂದಿದ್ದು, 10 ವರ್ಷಗಳ ಅನುಭವ, ಮುಂದುವರೆದ ಕಂಪ್ಯೂಟರ್ ಮಾಡೆಲ್‌ಗಳು/ಸಾಫ್ಟ್‌ವೇರ್‌ಗಳನ್ನು ಮೇಲಿನ ವಿಷಯಗಳಲ್ಲಿ ಬಳಸುವ ಜ್ಞಾನವಿರಬೇಕು. ರೂ 50,000/- ಗೌರವ ಧನ, ಪ್ರವಾಸ ಕಾಲದಲ್ಲಿ ರಾಜ್ಯ ಸರ್ಕಾರ ನಿಯಮಾವಳಿ ಪ್ರಕಾರ ದಿನಭತ್ಯೆ ನೀಡಲಾಗುವುದು.

ತಾಂತ್ರಿಕ ಸಹಾಯಕರ ಹುದ್ದೆಗೆ ಕೃಷಿ ಅರ್ಥಶಾಸ್ತ್ರ ಅಥವಾ ಕೃಷಿ ಮಾರುಕಟ್ಟೆ ಅಥವಾ ಕೃಷಿ ಸಂಖ್ಯಾಶಾಸ್ತ್ರ ಅಥವಾ ಕೃಷಿ ವಿಸ್ತರಣೆ ವಿಷಯಗಳಲ್ಲಿ ಸ್ನಾತಕೋತ್ತರ/ಪಿ.ಎಚ್.ಡಿ. ಪದವಿ ಹೊಂದಿರುವವರು ಅಥವಾ ಎಂ.ಸಿ. ಅರ್ಥಶಾಸ್ತ್ರ ಪದವಿ ಹೊಂದಿದ್ದು ಕೃಷಿಗೆ ಸಂಬಂಧಿಸಿದ ಸಂಶೋಧನೆ/ಅಧ್ಯಯನ/ಕಾರ್ಯ ನಿರ್ವಹಿಸಿರುವ ಅನುಭವನ ಹೊಂದಿರುವವರು ಜೊತೆಗೆ ಮುಂದುವರೆದ ಕಂಪ್ಯೂಟರ್ ಮಾಡೆಲ್‌ಗಳು/ಸಾಫ್ಟ್‌ವೇರ್‌ಗಳನ್ನು ಮೇಲಿನ ವಿಷಯಗಳಲ್ಲಿ ಬಳಸುವ ಜ್ಞಾನವಿರಬೇಕು. ರೂ 25,000/- ಗೌರವ ಧನ, ಪ್ರವಾಸ ಕಾಲದಲ್ಲಿ ರಾಜ್ಯ ಸರ್ಕಾರ ನಿಯಮಾವಳಿ ಪ್ರಕಾರ ದಿನಭತ್ಯೆ ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ಕೃಷಿ ಇಲಾಖಾ website http://raitamitra.kar.nic.in ನಲ್ಲಿ ಮಾಹಿತಿ ಪಡೆಯಬಹುದು. ಅರ್ಜಿಗಳನ್ನು ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿದ ಅರ್ಜಿಯನ್ನು ಆಗಸ್ಟ್ 11 ರ ಒಳಗಾಗಿ ಕರ್ನಾಟಕ ಕೃಷಿ ಬೆಲೆ ಆಯೋಗದ ಕಚೇರಿ, ಕೃಷಿ ಇಲಾಖಾ ಆವರಣ, ಶೇಷಾದ್ರಿ ರಸ್ತೆ, ಬೆಂಗಳೂರು ಇವರಿಗೆ ತಲುಪಿಸಬೇಕು. ಲಕೋಟೆಯ ಮೇಲೆ ಅರ್ಜಿ ಸಲ್ಲಿಸುವ ಹುದ್ದೆಯ ಹೆಸರನ್ನು ಕೆಂಪು ಶಾಯಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಕೃಷಿ ಬೆಲೆ ಆಯೋಗ ಕಚೇರಿಯ ದೂರವಾಣಿ 080-22074118/22115496) ಮೂಲಕ ಸಂಪರ್ಕಿಸಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಆಹಾರ ಧಾನ್ಯದ ಸಗಟು ಮಳಿಗೆಗಳಿಗೆ ಭೇಟಿ – ಗುಣಮಟ್ಟ ಪರಿಶೀಲನೆ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ರಾಜ್ಯ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು ಜುಲೈ 27 ರಂದು ಕೆ.ಎಫ್.ಸಿ.ಎಸ್.ಸಿ. ಯಶವಂತಪುರ, ಬೆಂಗಳೂರು ಆಹಾರ ಧಾನ್ಯದ ಸಗಟು ಮಳಿಗೆ ಭೇಟಿ ನೀಡಿ ಆಹಾರ ಧಾನ್ಯದ ಗುಣಮಟ್ಟವನ್ನು ಪರಿಶೀಲನೆ ಮಾಡಿರುತ್ತಾರೆ ಹಾಗೂ ಜಮೀರ್ ಅಹಮ್ಮದ್, ರಹಮತ್ ನಗರ ನ್ಯಾಯಬೆಲೆ

ಅಂಗಡಿಗೆ ಬೇಟಿ ಆನ್‌ಲೈನ್‌ನಲ್ಲಿ ಪಾಸ್ ಯಂತ್ರದ ಮುಖಾಂತರ ಪಡಿತರ ಪದಾರ್ಥಗಳನ್ನು ವಿತರಿಸುವ ವ್ಯವಸ್ಥೆಯನ್ನು ಪರಿಶೀಲನೆ ಮಾಡಿರುತ್ತಾರೆ. ನಂತರ ಆಯುಕ್ತರ ಕಚೇರಿ, ಆಹಾರ ಇಲಾಖೆ ಬೆಂಗಳೂರು ಇಲ್ಲಿ ಆಯೋಗದ 2 ಸಭೆ ನಡೆಸಿದರು.

ಆಹಾರ ಇಲಾಖೆ, ಅಂಗನವಾಡಿ ಹಾಗೂ ಮಧ್ಯಾಹ್ನದ ಉಪಹಾರ ಯೋಜನೆಯಡಿಯಲ್ಲಿ ಪೂರೈಸುವ ಆಹಾರ ಧಾನ್ಯಗಳ ಸಂಬಂಧವಾಗಿ ಸಲಹೆಗಳು ಹಾಗೂ ದೂರುಗಳನ್ನು ಆಹಾರ ಆಯೋಗಕ್ಕೆ ಸಲ್ಲಿಸಲು ಆಹಾರ ಇಲಾಖೆಯ ನಿಯಂತ್ರಣ ಕೊಠಡಿಯ ಉಚಿತ ದೂರವಾಣಿ ಸಂಖ್ಯೆ –1967 ಕ್ಕೆ ಕರೆಮಾಡಲು ಸಾರ್ವಜನಿಕರಿಗೆ ತಿಳಿಸಿದೆ. ಆಹಾರ ಆಯೋಗದ ಇಮೇಲ್ ವಿಳಾಸ : **kasfoodcommi@gmail.com**

ಎಸ್‌ಎಂ:ಜೆಡಿ:ಜಿಪಿಆರ್.

# ಪೌರ ಕಾರ್ಮಿಕರ ವಿದೇಶಿ ಅಧ್ಯಯನ ಪ್ರವಾಸದ ಎರಡನೇ ತಂಡಕ್ಕೆ ಪೌರಾಡಳಿತ ಸಚಿವ ಈಶ್ವರ್ ಖಂಡ್ರೆ ಅವರಿಂದ ಬೀಳ್ಕೊಡುಗೆ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ನಗರ ಸ್ಥಳೀಯ ಸಂಸ್ಥೆಗಳ ಪೌರ ಕಾರ್ಮಿಕರ ಎರಡನೇ ತಂಡ ಇಂದು ರಾತ್ರಿ ಸಿಂಗಪೂರ್‌ಗೆ ಪ್ರಯಾಣ ಬೆಳೆಸಲಿರುವ ಹಿನ್ನೆಲೆಯಲ್ಲಿ ಪೌರಾಡಳಿತ ಸಚಿವ ಈಶ್ವರ ಖಂಡ್ರೆ ಇಂದು ಬಿಳ್ಕೊಟ್ಟರು.

ವಿಕಾಸಸೌಧದಲ್ಲಿ ಬಿಳ್ಕೋಡುಗೆ ಸಮಾರಂಭದಲ್ಲಿ ಮಾತನಾಡಿದ ಸಚಿವರು ರಾಜ್ಯ ಒಂದು ಸಾವಿರ ಪೌರ ಕಾರ್ಮಿಕರನ್ನು ಶುಚಿತ್ವದ ಕುರಿತಂತೆ ಅಧ್ಯಯನಮಾಡಿ ಅಲ್ಲಿಯ ವ್ಯವಸ್ಥೆಯನ್ನು ಅವಲೋಕಿಸಿ ರಾಜ್ಯದಲ್ಲಿ ಅಳವಡಿಸುವ ಯೋಜನೆ ಇದಾಗಿದೆ ಎಂದು ಸಚಿವರು ತಿಳಿಸಿದರು.

ಪ್ರವಾಸದಲ್ಲಿ ರಸ್ತೆ, ಸಾರ್ವಜನಿಕ ಪ್ರದೇಶ, ವಸತಿ ಸಂಕಿರಣ, ವಾಣಿಜ್ಯ ಸ್ಥಳಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಅವರಿಗೆ ಮಾಹಿತಿ ನೀಡಲಾಗುವುದು. ಘನ ತ್ಯಾಜದ ಸಂಗ್ರಹಣೆ ಹಾಗೂ ಸಂಸ್ಕರಣೆ ಬಗ್ಗೆ ತಿಳಿದುಕೊಳ್ಳಲು ಈ ಪ್ರವಾಸದ ಭಾಗವಾಗಿದೆ ಎಂದರು.

ನಾಳೆಯಿಂದ ನಾಲ್ಕು ದಿನಗಳ ಕಾಲ 2ನೇ ಪೌರಕಾರ್ಮಿಕ ತಂಡ ಪ್ರವಾಸ ಕೈಗೊಳ್ಳಲಿದ್ದು 40 ಜನ ಪೌರ ಕಾರ್ಮಿಕರ ಜೊತೆ ಅಧಿಕಾರಿಗಳು ಪ್ರವಾಸ ಕೈಗೊಳ್ಳಲಿದ್ದಾರೆ ಎಂದರು.

ಪ್ರತಿಯೊಬ್ಬರಿಗೂ ವಿಮಾನದ ಟಿಕೆಟ್‌ನ್ನು ಎಂ.ಎಸ್.ಐ. ಎಲ್. ಮೂಲಕ ನೀಡಲಾಗುತ್ತಿದ್ದು, ಇತರೆ ವೆಚ್ಚಕ್ಕಾಗಿ 100 ಡಾಲರ್‌ಗಳನ್ನು ರಾಜ್ಯ ಸರ್ಕಾರ ನೀಡಲಿದೆ. ಪೌರ ಕಾರ್ಮಿಕರು ವಾಪಾಸ್ಸಾದ ಬಳಿಕ ನಗರದಲ್ಲಿ ಶುಚಿತ್ವ ಕಾಪಾಡುವ ಕಾರ್ಯದಲ್ಲಿ ಮುಂದಾಗಲಿದ್ದಾರೆ ಎಂದು ಪೌರಾಡಳಿತ ಸಚಿವ ಈಶ್ವರ್ ಖಂಡ್ರೆ ಹೇಳಿದರು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರ ಕಾರ್ಮಿಕರ ನೇಮಕಾತಿ ಪ್ರಕ್ರಿಯೇ ಪ್ರಾರಂಭವಾಗಿದ್ದು, ರಾಜ್ಯ ಸಚಿವ ಸಂಪುಟದ ನಿರ್ಧಾರದಂತೆ ನೇಮಕಗೊಳ್ಳುವ ಪ್ರತಿಯೊಬ್ಬ ಕಾರ್ಮಿಕರಿಗೆ ಮಾಸಿಕ ನಿಗದಿಯಾದ ಮೊತ್ತ ಲಭ್ಯವಾಗಲಿದೆ ಎಂದು ಪೌರಾಡಳಿತ ಸಚಿವರು ಈ ಸಂದರ್ಭದಲ್ಲಿ ತಿಳಿಸಿದರು.

ಎಸ್‌ಎಂ:ಜೆಡಿ:ಜಿಪಿಆರ್.

## ಪ್ರೊ. ಯು.ಆರ್. ರಾವ್ ನಿಧನಕ್ಕೆ ಸಚಿವರ ಸಂತಾಪ

ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)

ದೇಶಕಂಡ ಶ್ರೇಷ್ಠ ವಿಜ್ಞಾನಿಗಳಲ್ಲೊಬ್ಬರಾದ ಪದ್ಮವಿಭೂಷಣ ಪ್ರೊ. ಉಡುಪಿ ರಾಮಚಂದ್ರ ರಾವ್ ಅವರ ನಿಧನಕ್ಕೆ ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಂ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಬಾರತಕ್ಕೆ ತಮ್ಮ ಅನನ್ಯ ಸೇವೆಗಳ ಮೂಲಕ ಅಪಾರ ಕೊಡುಗೆಗಳನ್ನು ನೀಡಿರುವ ಇಂತಹ ಮಹಾ ಚೇತನವನ್ನು ಕಳೆದುಕೊಂಡಿರುವುದು ದೇಶಕ್ಕೆ ತುಂಬಲಾರದ ನಷ್ಟವಾಗಿದೆ.

ಶ್ರೀಯುತರ ಆತ್ಮಕ್ಕೆ ಶಾಂತಿಯನ್ನು ಹಾಗೂ ಅವರ ಕುಟುಂಬ ವರ್ಗಕ್ಕೆ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿದೆ ಎಂದು ಅವರು ಪ್ರಾರ್ಥಿಸಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

## ಅವಧಿ ವಿಸ್ತರಣೆ

**ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)**

**ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚನೆ ದಿನಾಂಕ: 22-6-2017 ರಲ್ಲಿ ಕರ್ನಾಟಕ ಜಲ ಸಂಪನ್ಮೂಲ ಇಲಾಖೆಯಲ್ಲಿ ಖಾಲಿ ಇರುವ ಒಟ್ಟು 889 ಸಹಾಯಕ ಅಭಿಯಂತರರು (ಸಿವಿಲ್/ಮೆಕ್ಯಾನಿಕಲ್) ಮತ್ತು ಕಿರಿಯ ಅಭಿಯಂತರರು (ಸಿವಿಲ್/ಮೆಕ್ಯಾನಿಕಲ್) ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ ಕೊನೆಯ ದಿನಾಂಕ ಮತ್ತು ಸಮಯವನ್ನು ವಿಸ್ತರಿಸಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಯಮ 31-7-2017 (ರಾತ್ರಿ 11-45 ಗಂಟೆಯೊಳಗೆ) ಇ ಅಂಚೆ ಕಛೇರಿಯಲ್ಲಿ ಶುಲ್ಕ ಸಂದಾಯ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ 01-8-2017 (ಅಂಚೆ ಕಛೇರಿಯ ವ್ಯವಹಾರದ ವೇಳೆಯೊಳಗೆ)**



ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ 2017-18ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು  ಜೆ.ಹುಚ್ಚಪ್ಪ ನಿಗಮದ ಅಧ್ಯಕ್ಷರು ಮತ್ತು ಡಾ॥ ಎಂ.ಆರ್.ಏಕಾಂತಪ್ಪ, ವ್ಯವಸ್ಥಾಪಕ ನಿರ್ದೇಶಕರು ದಿನಾಂಕ:22/07/2017ರಂದು ಬಿಡುಗಡೆ ಮಾಡಿದರು. ನಿಗಮದ ನಿರ್ದೇಶಕ ಮಂಡಳಿ ಸದಸ್ಯರಾದ ಎಂ.ಶಿವಕುಮಾರ್, ವೆಂಕಟರಮಣ ಮತ್ತು  ಮುನಿರಾಜು ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ರೇರಾ ಕಾಯಿದೆ ಜಾರಿಗೆ

**ಬೆಂಗಳೂರು, ಜುಲೈ 24 (ಕರ್ನಾಟಕ ವಾರ್ತೆ)**

**ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017ಕ್ಕೆ ರಾಜ್ಯ ಸಚಿವ ಸಂಪುಟವು ಅನುಮೋದನೆ ನೀಡಿದ್ದು, ಇದನ್ನು ದಿನಾಂಕ 10/7/2017ರಂದು ಅಧಿಸೂಚನೆ ಮೂಲಕ ಪ್ರಕಟಿಸಲಾಗಿದೆ, ಹಾಗೂ ಇದನ್ನು ದಿನಾಂಕ 11/07/2017ರಂದು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಮೂಲಕ ಜಾರಿಗೆ ತರಲಾಗಿದೆ.**

**ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ ಮತ್ತು ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು ರಾಜ್ಯದಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವನ್ನು (ರೇರಾ) ಸ್ಥಾಪಿಸಲು ಅವಕಾಶ ಕಲ್ಪಿಸಿರುತ್ತದೆ.  ಪ್ರಾಧಿಕಾರದ ತೀರ್ಮಾನ, ಆದೇಶ ಮತ್ತು**

ನಿರ್ದೇಶನಗಳನ್ನು ಪ್ರಶ್ನಿಸುವ ಸಲುವಾಗಿ ರಿಯಲ್ ಎಸ್ಟೇಟ್ ಮೇಲ್ಮನವಿ ಪ್ರಾಧಿಕಾರವನ್ನು ಸ್ಥಾಪಿಸಲು ಸಹ ಅವಕಾಶ ಇರುತ್ತದೆ.

ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದಂತೆ ಸರ್ಕಾರವು ತೆಗೆದುಕೊಂಡಿರುವ ಮೇಲ್ಕಂಡ ಕ್ರಮವು ಸಾರ್ವಜನಿಕರಿಗೆ ಅಗತ್ಯ ಮಾಹಿತಿ ಪಡೆದುಕೊಳ್ಳಲು, ತಾವು ಇಚ್ಛೆ ಪಟ್ಟ ಪ್ರದೇಶಗಳಲ್ಲಿ ನಿವೇಶನ/ ಅಪಾರ್ಟ್‌ಮೆಂಟ್/ ಮನೆಗಳನ್ನು ಹೆಚ್ಚಿನ ರೀತಿಯ ಶ್ರಮವಿಲ್ಲದೆ ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿರುತ್ತದೆ ಹಾಗೂ ರಿಯಲ್ ಎಸ್ಟೇಟ್ ಉದ್ದಿಮೆದಾರರು ಹಾಗೂ ಏಜೆಂಟರ ವಿರುದ್ಧ ದೂರುಗಳನ್ನು ದಾಖಲಿಸಲು ಅಥವಾ ಪರಿಹಾರವನ್ನು ಪಡೆಯಲು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮವು ಸಾರ್ವಜನಿಕರಿಗೆ ಒಂದು ಕಾನೂನು ಬದ್ಧ ವೇದಿಕೆಯನ್ನು ಒದಗಿಸಿಕೊಟ್ಟಿದೆ. ಹಣ ಕಟ್ಟಿಸಿಕೊಂಡು ನಿವೇಶನ / ಅಪಾರ್ಟ್‌ಮೆಂಟ್ / ಮನೆಗಳನ್ನು ನೋಂದಾಯಿಸಿಕೊಳ್ಳಲು ವಿಳಂಬ ಮಾಡುವ / ಮೋಸ ಮಾಡುವ ರಿಯಲ್ ಎಸ್ಟೇಟ್ ಉದ್ದಿಮೆದಾರರು ಹಾಗೂ ಏಜೆಂಟರ ವಿರುದ್ಧ ಸಾರ್ವಜನಿಕರು ದೂರುಗಳನ್ನು ದಾಖಲಿಸಿ ಪರಿಹಾರ ಪಡೆದುಕೊಳ್ಳಬಹುದಾಗಿದೆ. ಈ ಮೂಲಕ ಗ್ರಾಹಕರ ಹಕ್ಕು ಮತ್ತು ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರವು ಕ್ರಮ ಕೈಗೊಂಡಿರುತ್ತದೆ.

ಮೇಲ್ಕಂಡಂತೆ ಕಾನೂನನ್ನು ರಚನೆ ಮಾಡುವ ಮೂಲಕ ರಿಯಲ್ ಎಸ್ಟೇಟ್ ಚಟುವಟಿಕೆಗೆ ಸಂಬಂಧಿಸಿದಂತೆ ರಿಯಲ್ ಎಸ್ಟೇಟ್ ಉದ್ದಿಮೆದಾರರು ಹಾಗೂ ಏಜೆಂಟರು ರೇರಾ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸಿಕೊಳ್ಳುವುದನ್ನು ಹಾಗೂ ತಾವು ಮಾರಾಟ ಮಾಡ ಬಯಸುವ ನಿವೇಶನ / ಅಪಾರ್ಟ್‌ಮೆಂಟ್ / ಮನೆಗಳನ್ನು ಕಡ್ಡಾಯವಾಗಿ ರೇರಾ ಅಂತರ್ಜಾಲ ಪೋರ್ಟಲ್‌ನಲ್ಲಿ ಪ್ರಕಟಿಸುವುದನ್ನು ಕಡ್ಡಾಯ ಮಾಡಲಾಗಿದೆ. ಈ ಕ್ರಮವು ಖರೀದಿಸಲು ಬಯಸುವ ಗ್ರಾಹಕರಿಗೆ ಹೆಚ್ಚಿನ ರೀತಿಯ ಪಾರದರ್ಶಕತೆ, ಆಯ್ಕೆ ಮತ್ತು ಅವಕಾಶಗಳನ್ನು ಕಲ್ಪಿಸಿವುದರ ಜೊತೆಗೆ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಲು ಸಹ ಅವಕಾಶ ಮಾಡಿಕೊಡುತ್ತದೆ.

ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮದ ಪ್ರಮುಖ ಅಂಶಗಳು ಈ ಕೆಳಕಂಡಂತೆ ಇವೆ:

- "ಪ್ರಗತಿಯಲ್ಲಿರುವ ಯೋಜನೆಗಳು" ಎಂಬ ಪದದ ಬಗ್ಗೆ ಸ್ಪಷ್ಟವಾದ ವಿವರಣೆ ನೀಡುವ ಮೂಲಕ ಆ ಬಗ್ಗೆ ಕಂಡು ಬರುವ ಅಸ್ಪಷ್ಟತೆಗೆ ತೆರೆ ಎಳೆಯಲಾಗಿದ್ದು, ಮೇಲ್ಕಂಡ ಅಧಿನಿಯಮದ ವ್ಯಾಪ್ತಿಯಲ್ಲಿ ಬಹಳಷ್ಟು ಪ್ರಗತಿಯಲ್ಲಿರುವ ಯೋಜನೆಗಳು ಬರುತ್ತವೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

- ನೋಂದಾಯಿತ ಯೋಜನೆಗಳಲ್ಲಿ ಮಾರಾಟ ಮಾಡಲ್ಪಡುವ ಅಪಾರ್ಟ್‌ಮೆಂಟ್‌ಗಳ ಒಳ ವಿಸ್ತೀರ್ಣವನ್ನು ಕಾರ್ಪೆಟ್ ಏರಿಯಾ ವಿಸ್ತೀರ್ಣಕ್ಕೆ ನಿಗಧಿಪಡಿಸುವುದನ್ನು ನಿಯಮಗಳಲ್ಲಿ ಕಡ್ಡಾಯ ಮಾಡಿರುವುದರಿಂದ, ಗ್ರಾಹಕರಿಗೆ ಸ್ಪಷ್ಟ ಮಾಹಿತಿ ದೊರಕುತ್ತದೆ.

- ಪ್ರಗತಿಯಲ್ಲಿರುವ ಯೋಜನೆಗಳಲ್ಲಿ ರಿಯಲ್ ಎಸ್ಟೇಟ್ ಉದ್ದಿಮೆದಾರರು ಈಗಾಗಲೇ ಗ್ರಾಹಕರಿಂದ ಸಂಗ್ರಹಿಸಿರುವ ಹಣದ ಪೈಕಿ ಶೇಕಡ 70ರಷ್ಟು ಮೊತ್ತವನ್ನು ಠೇವಣಿ ಇಡಬೇಕಾಗಿರುತ್ತದೆ. ಈ ರೀತಿ ಠೇವಣಿ ಇಡಲಾದ ಮೊತ್ತವು ಯೋಜನೆಯ ಅಭಿವೃದ್ಧಿ/ ನಿರ್ಮಾಣಕ್ಕೆ ಹಣಕಾಸು ಒದಗಿಸುವುದಲ್ಲದೇ, ಗ್ರಾಹಕರು ಠೇವಣಿ ಇಟ್ಟಿರುವ ಮೊತ್ತವನ್ನು ದುರುಪಯೋಗಪಡಿಸಿಕೊಳ್ಳುವುದನ್ನು ತಡೆಗಟ್ಟುತ್ತದೆ.

ರಿಯಲ್ ಎಸ್ಟೇಟ್ ಉದ್ದಿಮೆದಾರರು ಮತ್ತು ನಿರ್ಮಾಣಗಾರರು ಸೇರಿದಂತೆ ರಿಯಲ್ ಎಸ್ಟೇಟ್ ಏಜೆಂಟರುಗಳನ್ನು ಸಹ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ವ್ಯಾಪ್ತಿಯಲ್ಲಿ ತರಲಾಗಿದೆ.

ಈ ಕ್ರಮವು ಅನವಶ್ಯಕ ವ್ಯಕ್ತಿಗಳನ್ನು ರಿಯಲ್ ಎಸ್ಟೇಟ್ ಉದ್ದಿಮೆಯಿಂದ ಬೇರ್ಪಡಿಸುತ್ತದೆ ಮತ್ತು ಗ್ರಾಹಕರು ಅನಧಿಕೃತ ಏಜೆಂಟರುಗಳ ಜೊತೆ ವ್ಯವಹಾರ ನಡೆಸುವುದನ್ನು ತಪ್ಪಿಸುತ್ತದೆ.

ರಿಯಲ್ ಎಸ್ಟೇಟ್ ವ್ಯವಹಾರಗಳಿಗೆ ಸಂಬಂಧಿಸಿದಂತೆ ರಿಯಲ್ ಎಸ್ಟೇಟ್ ಉದ್ದಿಮೆದಾರರು ಮತ್ತು ನಿರ್ಮಾಣಗಾರರು ಸೇರಿದಂತೆ ರಿಯಲ್ ಎಸ್ಟೇಟ್ ಏಜೆಂಟರುಗಳ ಚಟುವಟಿಕೆಗಳ ಬಗ್ಗೆ ಮಾಹಿತಿಯು ಸಾರ್ವಜನಿಕರಿಗೆ ಲಭ್ಯವಾಗುವಂತೆ ಪ್ರಕಟಿಸಲು ಅಂತರ್ಜಾಲ ಪೋರ್ಟಲ್ ಒಂದನ್ನು ನಿರ್ವಹಿಸುವುದನ್ನು ಅಧಿನಿಯಮವು ಕಡ್ಡಾಯಮಾಡಿರುತ್ತದೆ.

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಂತರ್ಜಾಲ ಪೋರ್ಟಲ್ ವಿಳಾಸ ಈ ಕೆಳಕಂಡಂತೆ ಇರುತ್ತದೆ:

rera.karnataka.gov.in
housing.kar.nic.in

ಮೇಲ್ಕಂಡ ಅಂತರ್ಜಾಲ ಪೋರ್ಟಲ್ ಬಳಕೆ, ರಿಯಲ್ ಎಸ್ಟೇಟ್ ಉದ್ದಿಮೆದಾರರು ಮತ್ತು ಏಜೆಂಟರುಗಳ ನೋಂದಣಿ ಮತ್ತು ಮಾಹಿತಿಗಾಗಿ ಈ ಕೆಳಕಂಡ ಇ-ಮೇಲ್ ಮೂಲಕ ಸಂಪರ್ಕಿಸಬಹುದಾಗಿದೆ:

**info.rera@karnataka.gov.in**

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ರೇರಾ) ಕಚೇರಿಯನ್ನು ಈ ಕೆಳಕಂಡ ವಿಳಾಸದಲ್ಲಿ ಪ್ರಾರಂಭಿಸಲಾಗಿದೆ:

ನೆಲಮಹಡಿ, ಕರ್ನಾಟಕ ಗೃಹ ಮಂಡಳಿ ಸಮುಚ್ಛಯ
ಕಾವೇರಿ ಭವನ, ಕೆಂಪೇಗೌಡ ರಸ್ತೆ
ಬೆಂಗಳೂರು–560009

ಮೇಲ್ಕಂಡ ಅಂತರ್ಜಾಲ ಪೋರ್ಟಲ್ ಮೂಲಕ ರಿಯಲ್ ಎಸ್ಟೇಟ್ ಉದ್ದಿಮೆದಾರರು ಮತ್ತು ಏಜೆಂಟರುಗಳು ಶುಲ್ಕ / ಶೇವಣಿ ಜಮಾ ಮಾಡಬಹುದಾಗಿದೆ. ಇದಕ್ಕಾಗಿ ಪೋರ್ಟಲ್ ಅನ್ನು 'ಕರ್ನಾಟಕ ಖಜಾನೆ–2' ಜೊತೆ ಸಂಪರ್ಕ ಕಲ್ಪಿಸುವ ಮೂಲಕ 'k2.karnataka.gov.in' ಹಣ ಪಾವತಿ ಮಾಡಲು ಅನುಕೂಲ ಮಾಡಿಕೊಡಲಾಗಿದೆ. ಈ ಸಂಬಂಧ ಬಳಕೆದಾರರು ಕೆಳಕಂಡಂತೆ ಕ್ರಮ ವಹಿಸಬೇಕಾಗುತ್ತದೆ.

1. On the K2 page, select citizen and then click on generate challan.
2. After filling in remitter details, select category as government, district as Bengaluru urban, and department as housing secretariat.
3. Select purpose as fees and fines collected under RERA, select the sub purpose and enter the amount to be paid.
4. After adding this screen, select the mode of payment as e-payment, type as net-banking and select one of the banks.
5. After the payment is completed, the user is required to take a print of the acknowledgement and upload that on the rera portal along with the khajane-II challan number.

ಈ ಕೆಳಕಂಡ ಪಟ್ಟಿಯಲ್ಲಿ ವಿವಿಧ ಉದ್ದೇಶಗಳಿಗೆ ರೇರಾ ಪೋರ್ಟಲ್‌ನಲ್ಲಿ ಹಣ ಪಾವತಿಸಬೇಕಾದ ವಿವರಗಳನ್ನು ನೀಡಿದೆ.

| | | | | |
|---|---|---|---|---|
| **Project Registration by Developers** | | Area of proposed land <1000 Sq. Mt | Area of proposed land >1000 Sq Mt | Max Fee Payable |
| | **Group Housing Project** | **Rs 5 per sq. mt** | **Rs 10 per sq. mt** | **Rs 5 lakhs** |
| | **Mixed Development Project** | **Rs 10 per sq. mt** | **Rs 15 per sq. mt** | **Rs 7 lakhs** |
| | **Commercial Project** | **Rs 20 per sq. mt** | **Rs 25 per sq. mt** | **Rs 10 lakhs** |
| | | Area of proposed land <1000 Sq. Mt | Max Fee Payable | |
| | **Plotted Development Project** | **Rs 5 per sq. mt** | **Rs 2 lakhs** | |
| | **Extension of Registration** | ***50% of project registration fees** | | |
| | | | | |
| **Rea Estate Agent Registration** | | New Registration | Renewal of Registration | |
| | **Individual** | **Rs 25000** | **Rs 5000** | |
| | **Society/company/ partnership firm/ trust** | **Rs 2 lakhs** | **Rs 25000** | |

***Provided that where the promoter applies for extension of registration of the project due to force majeure he shall not be liable to pay any fee.**

**ಮೇಲ್ಕಂಡಂತೆ ಕಾನೂನು ರಚನೆ ಮಾಡಿ ನಿಯಮಗಳನ್ನು ಜಾರಿಗೆ ತಂದಿರುವುದರಿಂದ ರಿಯಲ್ ಎಸ್ಟೇಟ್ ವಲಯದ ಚಟುವಟಿಕೆಗಳು ಕ್ರಮಬದ್ಧಗೊಳ್ಳುವ ಮೂಲಕ ರಾಜ್ಯದಲ್ಲಿನ ರಿಯಲ್ ಎಸ್ಟೇಟ್ ಗ್ರಾಹಕರಿಗೆ ಅತ್ಯಂತ ಅವಶ್ಯಕವಾಗಿದ್ದ ವೇದಿಕೆಯನ್ನು ಒದಗಿಸಿ ಕೊಡುವ ಮೂಲಕ ಅಗತ್ಯ ಮಾಹಿತಿ ಮತ್ತು ಪರಿಹಾರ ಪಡೆದುಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿರುತ್ತದೆ. ಅಂತರ್ಜಾಲ ಪೋರ್ಟಲ್ ಜಾರಿಗೊಳಿಸಿರುವ ಕ್ರಮವು ರಿಯಲ್ ಎಸ್ಟೇಟ್ ಉದ್ದಿಮೆದಾರರು ಮತ್ತು ಏಜೆಂಟರುಗಳ ನೋಂದಣಿ ಮಾಡಿಕೊಳ್ಳುವ ಮೂಲಕ ವಿಸ್ತಾರವಾದ ಗ್ರಾಹಕ ವಲಯವನ್ನು ಸಹ ತಲುಪಲು ಅವಕಾಶ ಮಾಡಿಕೊಟ್ಟಿರುತ್ತದೆ**

**ಯಾವುದೇ ರಿಯಲ್ ಎಸ್ಟೇಟ್ ಉದ್ದಿಮೆದಾರರು ಮತ್ತು ಏಜೆಂಟರುಗಳ ನೋಂದಣಿ ಮಾಡಿಕೊಳ್ಳದೆ ರಿಯಲ್ ಎಸ್ಟೇಟ್ ವ್ಯವಹಾರಗಳನ್ನು ನಡೆಸಿದಲ್ಲಿ ಅಂತಹವರ ವಿರುದ್ಧ ಕ್ರಮ ಜರುಗಿಸಲು ಮೇಲ್ಕಂಡ ಅಧಿನಿಯಮ ಮತ್ತು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.**

## KRERA RULES 2017 APPROVED

Bangalore, July 24 (Karnataka Information)

**Government of India has promulgated the Real Estate (Regulation and Development) Act, 2016, which is meant for regulation of real estate sector. It envisaged setting up for Real Estate Regulatory Authority (RERA) and formulation of Rules by Government.**

**Karnataka Real Estate (Regulation and Development) Rules-2017 were approved by the State Cabinet and notified on 10th July, 2017 and have come into effect from the date of their publication in the Official Gazette.**

**These rules allow for establishment of a Real Estate Regulatory Authority (RERA) in the state for regulation and promotion of the real estate sector. A Real Estate Appellate Tribunal will also be setup to hear appeals from the decisions, directions or orders of the Authority.**

**This Act now gives consumers within the state a platform to voice their grievances and lodge complaints against a promoter/agent. This will ensure that the State's citizens can now get information and choose suitable apartments/houses/plots without having to worry about the project execution and with a recourse to complaints and suitable action against defaulting developers/agents. In the long run, this will lead to more responsible conduct within the Real Estate community and protect consumer interests.**

**Further, it has been mandated that all real estate related marketing and promotional activities must indicate the registration details, so as to keep prospective buyers informed. This will provide greater transparency and accountability in project-marketing and execution and also provide a mechanism for grievance redressal of aggrieved home buyers.**

**Some of the other salient aspects of the Rules include –**

- The term "Ongoing" projects has been clearly defined to avoid ambiguities and guarantee that most of the projects come within the ambit of the Act
- Registered projects will have to abide by the rule where apartments would now be sold on the basis of carpet area only, encouraging clear communication to prospective buyers
- Promoters have to deposit seventy percent of the amounts already realized from the allottees in ongoing projects. This will only be available for use in developmental purposes and prevent misuse and diversion of these funds

**Apart from promoters and builders, Real Estate agents have also been brought under the purview of the Authority. This will remove unscrupulous people from the system and safeguard prospective consumers from entering into any transaction with unverified agents.**

**The Act also stipulates deployment of a dedicated portal and makes it mandatory for all commercial and residential real estate projects as well as agents to register with the Real Estate Regulatory Authority, subject to the conditions laid down in the Act.**

**In line with the RERA Act and directions of the Interim Real Estate Regulatory Authority, a Web Portal has been created which would allow registration of projects, registration of real estate agents and registration of complaints from buyers.**

**The portal can be accessed at rera.karnataka.gov.in**

**Any issues related to usage of the portal for registration of projects, agents or complaints can be sent to info.rera@karnataka.gov.in**
**The office of the 'RERA Karnataka' shall be located at**

**Karnataka Housing Board Complex**
**Ground Floor, Cauvery Bhavan**
**K G Road, Gandhi Nagar**
**Bengaluru, Karnataka – 560009**

**The portal also has the facility of making payments through Karnataka Khajane-II. Users of the RERA portal will get a link on the payment page directing them to k2.karnataka.gov.in. The following steps should be followed by the users to make the payment:**

1. On the K2 page, select citizen and then click on generate challan.
2. After filling in remitter details, select category as government, district as Bengaluru urban, and department as housing secretariat.
3. Select purpose as fees and fines collected under RERA, select the sub purpose and enter the amount to be paid.
4. After adding this screen, select the mode of payment as e-payment, type as net-banking and select one of the banks.
5. After the payment is completed, the user is required to take a print of the acknowledgement and upload that on the RERA portal along with the khajane-II challan number.

**A related website of Department of Housing is: www.housing.kar.nic.in.**

**The following chart shows details of the fee to be paid for various requests on the rera portal:**

| Project Registration By Developers | | Area of proposed land <1000 Sq. Mt | Area of proposed land >1000 Sq Mt | Max Fee Payable |
|---|---|---|---|---|
| | Group Housing Project | Rs 5 per sq. mt | Rs 10 per sq. mt | Rs 5 lakhs |
| | Mixed Development Project | Rs 10 per sq. mt | Rs 15 per sq. mt | Rs 7 lakhs |
| | Commercial Project | Rs 20 per sq. mt | Rs 25 per sq. mt | Rs 10 lakhs |
| | | Area of proposed land <1000 Sq. Mt | Max Fee Payable | |
| | Plotted Development Project | Rs 5 per sq. mt | Rs 2 lakhs | |
| | Extension of Registration | *50% of project registration fees | | |
| | | | | |
| Real Estate Agent Registration | | New Registration | Renewal of Registration | |
| | Individual | Rs 25000 | Rs 5000 | |
| | Society/company/ partnership firm/ trust | Rs 2 lakhs | Rs 25000 | |

*Provided that where the promoter applies for extension of registration of theproject due to force majeure he shall not be liable to pay any fee

**Buyers/Consumers can also file their complaint against registered projects through the portal.**

**The project registration by developers and real estate agents is mandatory and those not registering will face action under Real Estate (Regulation and Development) Act, 2016.**